**ದಿನಾಂಕ :02-01-2021ರಂದು ಶನಿವಾರ ಬೆಳಗ್ಗೆ 11:00 ಅನ್ನಸಂದ್ರ ಪಾಳ್ಯದ, ಬಿ.ಬಿ.ಎಂ.ಪಿ ಯೋಗ ಸೆಂಟರ್‌ನಲ್ಲಿ ವಾರ್ಡ್ ಸಂಖ್ಯೆ:87ರ, ಶ್ರೀ.ವಿಜಯ ಕುಮಾರ್ ಸಹಾಯಕ ಕಾರ್ಯಪಾಲಕ ಅಭಿಯಂತರರು (Nodel Officer) ರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.**

**ಹಾಜರಿದ್ದ ಅಧಿಕಾರಿಗಳು :**

| | |
|---|---|
| 1. | ಶ್ರೀ.ಹೆಚ್.ಚಂದ್ರಪ್ಪ (ಸಹಾಯಕ ಅಭಿಯಂತರರು) |
| 2. | ಶ್ರೀ. ರಾಘವೇಂದ್ರ ಕೆ.ವಿ, ಹಿರಿಯ ಆರೋಗ್ಯ ಪರಿವೀಕ್ಷಕರು |
| 3. | ಶ್ರೀ. ರಂಗನಾಥ, ಕಿರಿಯ ಆರೋಗ್ಯ ಪರಿವೀಕ್ಷಕರು |
| 4. | ಶ್ರೀ.ಸಂಜಯ್.ಎಸ್ (ಸ.ಅ ವಿದ್ಯುತ್ ವಿಭಾಗ) |
| 5. | ಶ್ರೀ.ಗೌಡ (ವಿದ್ಯುತ್ ವಿಭಾಗ) |
| 6. | ಶ್ರೀ.ಕೃಷ್ಣಪ್ಪ |
| 7. | ಶ್ರೀ.ಸ್ವಸ್ತಿಕ ಮಣಿ |
| 8. | ಎಂ.ಎಸ್.ಬಾಲ ಸುಬ್ರಮಣ್ಯ |
| 9. | ಶ್ರೀ.ವಿ ನಾಗರಾಜ ರೆಡ್ಡಿ |
| 10. | ನಿವಾಸಿ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಸಾರ್ವಜನಿಕರು |

ಮಾನ್ಯ ಅಧ್ಯಕ್ಷರು ಹಾಜರಿದ್ದ ಅಧಿಕಾರಿಗಳು, ವಾರ್ಡ್ ಸಮಿತಿ ಸದಸ್ಯರು ಹಾಗೂ ರೆಸಿಡೆಂಟ್ಸ್ ವೆಲ್ಫೇರ್ ಆಸೋಸಿಯೆಷನ್‌ನ ಅಧ್ಯಕ್ಷರುಗಳು, ಪ್ರತಿನಿದಿಗಳು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸುತ್ತಾ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

ಈ ಹಿಂದೆ ನಡೆದ ಸಭೆಯ ನಡವಳಿಗಳನ್ನು ಓದಿ ರೆಕಾರ್ಡ್ ಮಾಡಲಾಯಿತು.

ಪ್ರಪಂಚದಾದ್ಯಂತ ಕೋವಿಡ್-19 ಮಹಾಮಾರಿ ರೋಗವು ಹರುಡುತ್ತಿರುವುದು ಗಮನಾರ್ಹವಾಗಿ ಕಡಿಮೆಯಾಗಿರುವದನ್ನು ಸಭೆಯ ಗಮನಕ್ಕೆ ತರುತ್ತಾ ಯಾವುದೇ ಕಾರಣಕ್ಕೂ ಸಾರ್ವಜನಿಕ ಪ್ರದೇಶಗಳಲ್ಲಿ ಮುಖ ಗವಸು ಇಲ್ಲದೇ ಅಂತರ ಕಾಯ್ದುಕೊಳ್ಳದೇ ಇರಬಾರದೆಂದು ಕಾಲಕಾಲಕ್ಕೆ ಸ್ಯಾನಿಟೈಸರ್ಸ್‌ಗಳನ್ನು ಉಪಯೊಗಿಸಿಕೊಂಡು ಮಹಾಮಾರಿ ರೋಗದಿಂದ ದೂರವಿರಲು ಕೋರಲಾಯಿತು ಹಾಗೂ ಸ್ಥಳೀಯ ನಿವಾಸಿ ಕ್ಷೇಮಾಭಿವೃದ್ಧಿ ಸಂಘಗಳು ಈ ದಿಸೆಯಲ್ಲಿ ಸಾರ್ವಜನಿಕರಿಗೆ ತಿಳುವಳಿಕೆ ಉಂಟು ಮಾಡುವಂತೆ ಕೊರಲಾಯಿತು.

ಕ್ರಮ:ಹಿರಿಯ ಆರೋಗ್ಯ ನಿರೀಕ್ಷಕರು



Scanned with CamScanner

ವಾರ್ಡ್ ಸಮಿತಿಯ ಸಭೆಯನ್ನು ವಾರ್ಡ್ ಸಂಖ್ಯೆ:87ರ ಅನ್ನಸಂದ್ರ ಪಾಳ್ಯದ ಯೋಗ ಸೆಂಟರ್‌ನಲ್ಲಿ ನಡೆಸಲಾಯಿತು, ಶ್ರೀ. ಎಂ.ಎಸ್.ಬಾಲ ಸುಬ್ರಮಣ್ಯ ರವರು ಮಾತನಾಡಿ ಯೋಗ ಸೆಂಟರ್‌ಎಂದು ನಾಮಫಲಕವನ್ನು ಬಿಲ್ಡಿಂಗ್ ಮುಂದೆ ಹಾಕಲು ಸೂಚಿಸಿದರು.

ಕ್ರಮ:ವಾರ್ಡ್ ಅಭಿಯಂತರರು

ಶ್ರೀ.ಸ್ವಸ್ತಿಕ್ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ವಿವಿದ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿದ್ದು ತುರ್ತಾಗಿ ಪೂರ್ಣಗೊಳಿಸಿಕೊಡುವಂತೆ ಕೋರಿದರು. ಇಸ್ಲಾಂಪುರ ಮತ್ತು ರಮೇಶ್ ನಗರ ಮುಖ್ಯ ರಸ್ತೆಯ ಪಾದಚಾರಿ ಮಾರ್ಗದಲ್ಲಿ ತಳ್ಳುವ ಗಾಡಿಯವರು ರಸ್ತೆ ಮತ್ತು ಪುಟ್‌ಪಾತ್‌ನಲ್ಲಿ ನಿಲ್ಲಿಸಿ ವ್ಯಾಪಾರ ಮಾಡುತ್ತಿರುವ ಕಾರಣ ಟ್ರಾಫಿಕ್ ಸಮಸ್ಯೆಯಾಗುತ್ತಿರುವುದನ್ನು ಸಭೆಯ ಗಮನಕ್ಕೆ ತಂದು, ತಳ್ಳುವ ಗಾಡಿರವರಿಗೆ ಲೈಸೆನ್ಸ್ ನೀಡಬಾರದೆಂದು ಕೋರಿದರು.

ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್ ವ್ಯಾಪ್ತಿಯ ಶ್ರೀರಾಮ ದೇವಸ್ಥಾನದ 1ನೇ ಕ್ರಾಸ್ ಬಳಿ ಒಳ ಚರಂಡಿಯನ್ನು ದುರಸ್ಥಿಗೋಳಿಸಲು ಕೋರಿದರು.

ಕ್ರಮ:ವಾರ್ಡ್ ಅಭಿಯಂತರರು ಮತ್ತು
ಟ್ರಾಫಿಕ್ ಪೋಲಿಸ್

ಶ್ರೀಮತಿ.ಜಯಲಕ್ಷ್ಮಿ ರವರು ಮಾತನಾಡಿ ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್ ವ್ಯಾಪ್ತಿಯ ಇಸ್ಲಾಂಪುರದ ರಸ್ತೆಯಲ್ಲಿ ಕಸದ ಸಮಸ್ಯೆ ತೀವ್ರವಾಗಿದ್ದು ಎಲ್ಲ ಕಡೆಯು ಸಾರ್ವಜನಿಕರು ಕಸವನ್ನು ಎಸೆಯುತ್ತಿದ್ದು, ದುರ್ವಾಸನೆ ಬಿರುತ್ತಿದ್ದು, ಓಡಾಡಲು ತುಂಬಾ ತೊಂದರೆಯಾಗುತ್ತಿದೆ ಎಂದು ತಿಳಿಸಿದರು.

ಶ್ರೀ.ವೆಂಕಟೇಶ್ ರವರು ಮಾತನಾಡಿ ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್ ವ್ಯಾಪ್ತಿಯ ಅನ್ನಸಂದ್ರ ಪಾಳ್ಯದ 4ನೇ ಕ್ರಾಸ್‌ನಲ್ಲಿ ಬೋರ್‌ವೇಲ್ ಕೊರೆದಿರುವ ದೂಳುರಸ್ತೆಯ ಮೇಲೆ ಹರಡಿದ್ದು ಈ ಬಗ್ಗೆ ಸೂಕ್ತ ಕ್ರಮ ವಹಿಸಲು ವಾರ್ಡ್ ಅಭಿಯಂತರರಿಗೆ ಸೂಸಿಸಲಾಯಿತು.

ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್ ವ್ಯಾಪ್ತಿಯ ಶ್ರೀರಾಮ ದೇವಸ್ಥಾನದ ಬಳಿ ಇರುವ ಬೋರ್‌ವೇಲ್ 1ನೇ ಕ್ರಾಸ್ ಬಳಿ ಒಳ ಚರಂಡಿಯನ್ನು ದುರಸ್ಥಿಗೋಳಿಸಲು ಕೋರಿದರು.

ಕ್ರಮ: ಸ.ಕಾ.ಅ, ಬಿ.ಡಬ್ಲ್ಯೂ.ಎಸ್.ಬಿ.

ಶ್ರೀ.ದೇವರಾಜು ರವರು ಮಾತನಾಡಿ ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್ ವ್ಯಾಪ್ತಿಯ 3ನೇ ಕ್ರಾಸ್ ವಿನಾಯಕ ನಗರದಲ್ಲಿ ನೀರಿನ ಸಮಸ್ಯೆಯಿದ್ದ ಸಂಬಂದಪಟ್ಟ ಅಧಿಕಾರಿಗಳಿಗೆ ಸೂಕ್ತ ಕ್ರಮ ವಹಿಸಲು ಕೋರಿದರು.

ಕ್ರಮ: ಸ.ಕಾ.ಅ, ಬಿ.ಡಬ್ಲ್ಯೂ.ಎಸ್.ಬಿ.

ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್‌ನ ಶ್ರೀ.ನಾಗರಾಜ ರೆಡ್ಡಿರವರು ಮಾತನಾಡಿ ವಾರ್ಡ್ ವ್ಯಾಪ್ತಿಯ ವಿಭೂತಿಪುರ ಮುಖ್ಯ ರಸ್ತೆಯಲ್ಲಿ ಚರಂಡಿ ತ್ಯಾಜ್ಯ ವಸ್ತುಗಳ ರಾಶಿ ಇರುವುದನ್ನು ಕೂಡಲೇ ತೆರವುಗೊಳಿಸಲು ಕೋರಿದರು, ಹಾಗೂ ಅಂಬರೀಶ್ ರವರ ಮಾತನಾಡಿ ವಿದ್ಯುತ್ ಕಂಬಗಳು ಚರಂಡಿಯಲ್ಲಿದ್ದು ಅನ್ನಸಂದ್ರ ಪಾಳ್ಯ 4ನೇ ಅಡ್ಡ ರಸ್ತೆಯಲ್ಲಿ ಚರಂಡಿ ತುಂಬಾ ಹಾಳಾಗಿದ್ದು ದುರಸ್ಥಿ ಗೊಳಿಸಲು ಸೂಚಿಸಿದರು.

ಕ್ರಮ:ವಾರ್ಡ್ ಅಭಿಯಂತರರು ಹಾಗೂ
ಸ.ಕಾ.ಅ ಬಿಡಬ್ಲ್ಯೂ.ಎಸ್.ಎಸ್.ಬಿ



Scanned with CamScanner

ರಮೇಶ್ ನಗರದಲ್ಲಿ ರಸ್ತೆಯ ನಿರ್ಮಾಣ, ಚರಂಡಿ ನಿರ್ಮಾಣ ಇತರೆ ಅಭಿವೃದ್ಧಿ ಕಾಮಗಾರಿಗಳು ಪ್ರಗತಿಯಲ್ಲಿದ್ದು ರಸ್ತೆಯ ಗುಣ ಮಟ್ಟದ ಬಗ್ಗೆ ಗಮನಹರಿಸುವಂತೆ ಸಭೆಯಲ್ಲಿದ್ದ ಸಾರ್ವಜನಿಕರು ಕೋರಿದರು.

ಕ್ರಮ:ವಾರ್ಡ್ ಅಭಿಯಂತರರು

ಶ್ರೀ.ವೆಂಕಟಸ್ವಾಮಿ ರೆಡ್ಡಿ ರವರು ಮಾತನಾಡಿ ನೀರಿನ ಸಂಪರ್ಕ ಕಡಿತಗೊಂಡಿದ್ದರೂ, ಹಾಗೂ ನೀರು ಸರಬಾರಾಜು ಇಲ್ಲದಿದ್ದರೂ ಸಹ ಬೇಕಾಬಿಟ್ಟಿ ನೀರಿನ ಬಿಲ್ಲು ನೀಡುತ್ತಿರುವುದನ್ನು ವಿವರಿಸಿದಾಗ ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಬಿ ರವರ ಕಛೇರಿಯಲ್ಲಿ ಸಂಪರ್ಕಿಸಿ ಇದಕ್ಕೆ ಪರಿಹಾರ ನೀಡುವುದಾಗಿ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ರವರು ಸಭೆಯಲ್ಲಿ ತಿಳಿಸಿದರು.

ಕ್ರಮ: ಸ.ಕಾ.ಅ, ಬಿ.ಡಬ್ಲ್ಯೂ.ಎಸ್.ಬಿ.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಾಯಕ ಅಭಿಯಂತರರು ಹಾಗೂ ಕಾರ್ಯದರ್ಶಿಗಳು
ವಾರ್ಡ್ ನಂ.87 ಹೆಚ್.ಎ.ಎಲ್ ಏರ್‌ಪೋರ್ಟ್

ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ
ನೋಡೆಲ್ ಅಧಿಕಾರಿಗಳು

**ಪ್ರತಿಯನ್ನು:**

1. ಮಾನ್ಯ ಜಂಟಿ ಆಯುಕ್ತರು, ಬಿಬಿಎಂಪಿ, ಮಹದೇವಪುರ ವಲಯ ರವರ ಮಾಹಿತಿಗಾಗಿ ಗೌರವ ಪೂರ್ವಕವಾಗಿ ಸಲ್ಲಿಸಿದೆ.
2. ತೋಟಗಾರಿಕೆ ಅಧೀಕ್ಷಕರು, ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.
3. ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೆಚ್.ಎ.ಎಲ್ ಏರ್‌ಪೋರ್ಟ್ ಉಪವಿಭಾಗ.
4. ಕಂದಾಯ ಅಧಿಕಾರಿಗಳು/ಸಹಾಯಕ ಕಂದಾಯ ಅಧಿಕಾರಿಗಳು/ನಿರೀಕ್ಷಕರು, ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.
5. ಕಲ್ಯಾಣ ಶಾಖೆ ಅಧಿಕಾರಿಗಳು, ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.
6. ಎಸ್.ಡಬ್ಲ್ಯೂ.ಎಂ, ಅಧಿಕಾರಿಗಳು/ಗುತ್ತಿಗೆದಾರರು, ಜಯನಗರ ಶಾಪಿಂಗ್ ಕಾಂಪ್ಲೆಕ್ಸ್ 9ನೇ ಮಹಡಿ, ಬೆಂಗಳೂರು–11.
7. ವಿದ್ಯುತ್ ವಿಭಾಗದ, ಅಧಿಕಾರಿಗಳು/ಗುತ್ತಿಗೆದಾರರು ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.
8. ಆರೋಗ್ಯ ಅಧಿಕಾರಿಗಳು ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.
9. ಸಹಾಯಕ ನಿದೇಶಕರು ಪಶುಪಾಲನೆ ಅಧಿಕಾರಿಗಳು/ಗುತ್ತಿಗೆದಾರರು ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.
10. ಬಿ.ಡಬ್ಲ್ಯೂ.ಎಸ್.ಎಸ್.ಬಿ, ಅಧಿಕಾರಿಗಳು/ಗುತ್ತಿಗೆದಾರರು ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.
11. ಟ್ರಾಫೀಕ್/ಸಿವಿಲ್ ಪೋಲಿಸ್, ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.
12. ರೆಸಿಡೆನ್ಸ್ ವೆಲ್‌ಫೇರ್ ಆಸೋಸಿಯೇಷನ್ಸ್, ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.
13. ವಾರ್ಡ್‌ಗೆ ಸಂಬಂಧಿಸಿದ ಎನ್.ಜಿ.ಓ ಗಳು ಹೆಚ್.ಎ. ಎಲ್ ಏರ್‌ಪೋರ್ಟ್ ವಾರ್ಡ್.
14. ವಾರ್ಡ್‌ಗೆ ಸಂಬಂಧಿಸಿದ, ಎಸ್.ಸಿ/ಎಸ.ಟಿ ಸಂಘಟನೆಗಳು.
15. ವಾರ್ಡ್‌ನ ಆಸಕ್ತಿಯುಳ್ಳ ವಾಲೆಂಟಿಯರ್ಸ್.



Scanned with CamScanner